ಶ್ರೀ ಜಿ. ಎಸ್. ಬಾಗಲಕೋಟೆ.— ಮಂಜೂರಾತಿ ವಿಚಾರ ಇರುವುದು ಕೇವಲ ಳ ತಿಂಗಳಿನಿಂದ ಬೇರೆ ಯಾವುದೇ ರೀತಿ ತಡವಾಗಿಲ್ಲ. ಹಣದ ಅಭಿವೃದ್ಧಿಯಿಂದ ತಡವಾಗಿದೆ ಎಂಬುದು ಸತ್ಯಕ್ಕೆ ದೂರ ವಾದುದು. ಅಂಥ ಉದಾಹರಣೆ ಕೊಟ್ಟರೆ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳ ಲಾಗುವುದು.

ಶ್ರೀ ಗೋಪಾಲ ಮಂಕುಂದ ಕಾನಡೆ.— ಮಂಜೂರಾತಿ ಕೊಡುವವರ ಮೇಲೆ ಭ್ರಷ್ಟಾಚಾರದ ಆಪಾದನೆ ಇದೆಯೇ ?

ಶ್ರೀ ಜಿ. ಎಸ್. ಬಾಗಲಕೋಟೆ.— ಮಂಜೂರಾತಿ ಕೊಡುವವರ ಮೇಲೆ ಯಾವುದೇ ತರಹದ ಭ್ರಷ್ಟಾಚಾರದ ಆಪಾದನೆ ಇಲ್ಲ. ಆ ಪ್ರಕಾರ ಏನಾದರೂ ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ತಿಳಿಸಬೇಕು. ಅಂಥವರ ಮೇಲೆ ತೀಕ್ಷ್ಣ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿ

೧೯ (ಡಿ) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಭಾರಿ ಹಾಗೂ ಮಧ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿವಿಧ ಮೂಲಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು? ಅದರಲ್ಲಿ ಕೃಷಿ, ಕೈಗಾರಿಕೆ, ಹಾಗೂ ಗೃಹೋಪಯೋಗಕ್ಕಾಗಿ ಸರಬರಾಜು ಮಾಡುತ್ತಿರುವ ವಿದ್ಯುತ್ ಪ್ರಮಾಣವೆಷ್ಟು?

ಆ) ಮೇಲ್ಕಂಡಂತೆ ವಿದ್ಯುತ್ ಸರಬರಾಜಿಗಾಗಿ ರಾಜ್ಯದಲ್ಲಿನ ಉತ್ಪಾದನೆ ಹೆಚ್ಚುವರಿ ಇದೆಯೆ ಅಥವಾ ಖೋತಾ ಆಗುತ್ತದೆಯೆ?

ಇ) ವಿದ್ಯುತ್ ಖೋತಾ ಇದ್ದಲ್ಲಿ ಖೋತಾ ಸರಿತೂಗಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಉದ್ದೇಶಿಸಲಾಗಿದೆ?

ಈ) ಪ್ರಸಕ್ತ ವಿದ್ಯುತ್ ಕಡಿತದಿಂದಾಗಿ ರಾಜ್ಯದ ಕೈಗಾರಿಕೆಗಳು ನಷ್ಟ ಅನುಭವಿಸುತ್ತಿರುವುದು ನಿಜವಲ್ಲವೆ. ಹಾಗಿದ್ದಲ್ಲಿ ಹೊಸದಾಗಿ ಪ್ರಾರಂಭಿಸಲಾಗುವ ಕೈಗಾರಿಕೆಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ ಸರಕಾರದವರು ಯೋಚಿಸಿರುವ ಕ್ರಮವೇನು?

ಶ್ರೀ ಜೆ. ಹೆಚ್. ಪಟೇಲ್ (ಭಾರಿ. ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೧೯೮೭–೮೮ರ ಸಾಲಿನಲ್ಲಿ ರಾಜ್ಯದಲ್ಲಿ ವಿವಿಧ ಮೂಲಗಳಿಂದ ಉತ್ಪತ್ತಿಯಾಗುವ ವಿದ್ಯುತ್ ಪ್ರಮಾಣ ೮೯೩೩ ಮಿಲಿಯನ್ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಪ್ರಸರಣಾ ಮತ್ತು ವಿತರಣೆಯಲ್ಲಿನ ನಷ್ಟವನ್ನು ಕಳೆದರೆ ೫೫೦೧ ಮಿಲಿಯನ್ ಯೂನಿಟ್ ಸರಬರಾಜಿಗೆ ದೊರೆಯುತ್ತದೆ. ನೆರೆರಾಜ್ಯಗಳಿಂದ ಅಮದು ಮತ್ತು ಕೇಂದ್ರ ಯೋಜನೆಗಳಿಂದ ನಮ್ಮ ಪಾಲನ್ನು ಸೇರಿಸಿಕೊಂಡಾ ೧೯೮೭–೮೮ರಲ್ಲಿ ಸರಬರಾಜು ಮಾಡಲು ನಿರೀಕ್ಷಿಸಿರುವ ವಿದ್ಯುತ್ ಪ್ರಮಾಣ ಈ ಕೆಳಗೆ ಕಂಡಂತಿದೆ.

	ಮಿ.ಯೂನಿಟ್‌ಗಳು
ಕೃಷಿ (ಪಂಪ್ ಸೆಟ್ಟುಗಳು)	೧೭೨೦
ಕೈಗಾರಿಕೆ	೩೪೪೩
ಗೃಹೋಪಯೋಗ	೧೭೦೬
ಇತರರಿಗೆ	೪೬೫
	೭೩೩೪

ಆ) ಖೋತಾ ಇದೆ.

ಇ) ಕೊರತೆಯನ್ನು ಭಾಗಶಃ ತುಂಬಲು ಕೇಂದ್ರದ ಯೋಜನೆಗಳಿಂದ ರಾಜ್ಯದ ಪಾಲನ್ನು ಪಡೆಯಲಾಗುವುದರ ಜೊತೆಗೆ ನೆರೆ ರಾಜ್ಯಗಳಿಂದ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ನೆರವು ಪಡೆಯಲಾಗುತ್ತದೆ.

ತುಂಬಲಾಗದ ಕೊರತೆ ಭರಿಸಲು ಗ್ರಾಹಕರ ಮೇಲೆ ವಿದ್ಯುತ್ತಿನ ಬಳಕೆಯ ಮೇಲೆ ಶೇಕಡ ೧೦ ರಿಂದ ೬೦ರವರೆಗೆ ಕಡಿತ ವಿಧಿಸಲಾಗಿದೆ. ಹಾಲಿ ಕಾರ್ಯಗತವಾಗುತ್ತಿರುವ ವಿದ್ಯುತ್ ಯೋಜನೆಗಳನ್ನು ತ್ವರಿತಗತಿಯಿಂದ ಮಾಡಿ ಮುಗಿಸಲು ಯತ್ನಿಸಲಾಗುತ್ತಿದೆ.

ಈ) ಕೈಗಾರಿಕೆಗಳ ಕಡಿತ ತೀಕ್ಷ್ಣತೆ ಕಡಿಮೆ ಮಾಡಲು ಕ್ಯಾಪ್ಟಿವ್ ಜನರೇಟರುಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗುತ್ತಿದೆ.

ಶ್ರೀ ಬಿ. ಲಕ್ಕಪ್ಪ.—ಸರ್ಕಾರದಲ್ಲಿ ಹಣ ಕೇಳಿದರೂ ಖೋತಾ. ಅಭಿವೃದ್ಧಿ ಕಾರ್ಯ ಕ್ರಮಗಳು ಖೋತ, ವಿದ್ಯುತ್ ಕೇಳಿದರೂ ಖೋತ. ಇದು ಖೋತಾ ಸರ್ಕಾರವಾಗಿದೆ.

ಅಧ್ಯಕ್ಷರು.—ನಿಮಗೆ ಪ್ರಶ್ನೆಗೆ ಉತ್ತರ ಬೇಕೋ ಬೇಡವೋ? ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಬೇರೆ ವೇದಿಕೆ ಇದೆ

ಶ್ರೀ ಬಿ. ಲಕ್ಕಪ್ಪ.—ರಾಜ್ಯದಲ್ಲಿ ವಿದ್ಯುತ್ ಖೋತಾ ಇದೆ ಎಂದು ಒಪ್ಪಿದ್ದಾರೆ. ಎಷ್ಟು ವಿದ್ಯುತ್ ಇದೆ. ಮುಂತ್ತ ಆದು ರಾಜ್ಯದ ಕೈಗಾರಿಕೆ ಮಂತ್ರಿಕರ ಎಲ್ಲಾ ಬಾಬಂಗಳಿಗೆ ಪೂರೈಕೆಯಾಗುತ್ತದೆಯೇ ಅಥವಾ ಖೋತಾ ಇದೆಯೇ ಹಾಗೂ ರಾಜ್ಯದ ಅವಶ್ಯಕತೆ ಎಷ್ಟು ಎಂದು ಕೇಳಿದ್ದೆ. ಅವರು ರಾಜ್ಯದಲ್ಲಿ ವಿದ್ಯುತ್ ಖೋತಾ ಇದೆ ಎಂದು ಒಪ್ಪಿದ್ದಾರೆ. ರಾಜ್ಯದಲ್ಲಿ ವಿದ್ಯುತ್ ಖೋತಾ ಇದ್ದ ಮೇಲೆ ಬೇಡ್ತಿ ವಿದ್ಯುತ್ ಯೋಜನೆ ಏನಿದೆ ಈ ಯೋಜನೆ ಮಂಜೂರಾತಿ ಪಡೆದಿದೆ. ಮುತ್ತು ಈಗಾಗಲೇ ೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ, ಈಗ ೪ ವರ್ಷಗಳಿಂದ ಆ ಯೋಜನೆಯ ಕೆಲಸ ಏನೂ ಆಗದೆ. ಹಾಗೇ ನಿಂತಿದೆ.

ಅಧ್ಯಕ್ಷರು.—ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಈ ಬೇಡ್ತಿ ಯೋಜನೆ ಹಾಗೆ ನಿಲ್ಲುವುದಕ್ಕೆ ಕಾರಣವೇನು? ಇದನ್ನು ಯಾವಾಗ ಪೂರೈಸುತ್ತೀರಿ? ಇವರಿಗೆ ಬೇಕಾದವರ ಕೆಲವು ಜಮೀನುಗಳು ಮುಳುಗಡೆಯಾಗುತ್ತದೆ ಎಂಬ ದೃಷ್ಟಿಯಿಂದ ನಿಲ್ಲಿಸಲಾಗಿದೆಯೇ? ಮುತ್ತೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಅಧ್ಯಕ್ಷರು.—ಈಗಿನದು ಸರಿ ಮೊದಲಿನದು ಸರಿಯಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಖೋತಾ ಇದೆ. ಅದಕ್ಕೆ ಕಾರಣ ವರ್ಷೇವರ್ಷೇ ಅತೀ ಹೆಚ್ಚಿನ ಬೇಡಿಕೆ ಇದ್ದು ಅದಕ್ಕೆ ನಾವು ಸಂಪರ್ಕವನ್ನು ಕೊಡುತ್ತಿರುವುದರಿಂದ ಖೋತಾ ಹೆಚ್ಚಾಗಿದೆ. ಇದನ್ನು ತುಂಬುವುದಕ್ಕೆ ರಾಯಚೂರು ಥರ್ಮಲ್ ಯೋಜನೆ ಎರಡನೇ ಹಂತದ ಕೆಲಸವನ್ನು ಈಗ ಪ್ರಾರಂಭ ಮಾಡಿದ್ದೇವೆ. ಅದರ ಜೊತೆಗೆ ವರಾಹಿ ಯೋಜನೆ ಮುಂದಿನ ವರ್ಷದ ಕೊನೆ ಹೊತ್ತಿಗೆ ಸಂಪೂರ್ಣವಾಗುತ್ತದೆ, ತಾವು ಹೇಳಿದಂತೆ ಬೇಡ್ತಿ ಯೋಜನೆ ಯಾರದೋ ಜಮೀನು ಮುಳುಗಡೆಯಾಗುತ್ತದೆ. ಆ ದೃಷ್ಟಿಯಿಂದ ನಿಂತಿಲ್ಲ. ಅದಕ್ಕೆ ಬೇರೆ ಕಾರಣ ಇದೆ. ಈ ಬಗ್ಗೆ ವಿಶೇಷವಾಗಿ ಬೇರೆ ಪ್ರಶ್ನೆ ಹಾಕಿದರೆ ಸಂಪೂರ್ಣವಾದ ಉತ್ತರವನ್ನು ಒದಗಿಸುವುಕ್ಕೆ ಪ್ರಯತ್ನ ಮಾಡಲಿ.

ಶ್ರೀ ಬಿ. ಲಕ್ಕಪ್ಪ.—ಬೇರೆ ಪ್ರಶ್ನೆ ಏತಕ್ಕೆ ಕಾರಣ ತಿಳಿಸುವುದಕ್ಕೆ ? ಈ ಕಾರಣ ಏನು ಎಂಬುದು ಟಫಳ ಸಿಂಪಲ್ ಪ್ರಶ್ನೆ, ಇದಕ್ಕೆ ಬೇರೆ ಪ್ರಶ್ನೆ ಬೇಕಾಗಿಲ್ಲ. ಇದಕ್ಕೆ ಒಂದು ಕಮಿಟಿ ಮಾಡಿದ್ದಾರೆ. ನಾಲ್ಕು ವರ್ಷಗಳಿಂದ ಈ ಯೋಜನೆ ನಿಂತಿರುವುದಕ್ಕೆ ಕಾರಣ ಏನು? ೧೫ ಕೋಟಿ ರೂಪಾಯಿ ಬಂಡವಾಳ ಹಾಕಿದ್ದಾರೆ ಅದಕ್ಕೆ ಬಡ್ಡಿ ಏನಾಗುತ್ತದೆ? ವಿದ್ಯುತ್ ಉತ್ಪಾದನೆಯೂ ಆಗಲಿಲ್ಲ, ಹಾಕಿರತಕ್ಕ ಬಂಡವಾಳಕ್ಕೆ ಬಡ್ಡಿಯೂ ಬರಲಿಲ್ಲ. ಇದಕ್ಕೆ ಕಾರಣ ಹೇಳುವುದಕ್ಕೆ ಬೇರೆ ಪ್ರಶ್ನೆಯ ಅಗತ್ಯ ಇರಲಿಲ್ಲ

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕೆ ಕಾರಣ ಬೇಡ್ತಿ ಮತ್ತು ಬರ್ಪೊಳೆ ಜಲ ವಿದ್ಯುತ್ ಯೋಜನೆಗಳು ಪ್ರಾರಂಭವಾದಾಗ ಆ ಪ್ರದೇಶದ ಜನ ಒಬ್ಬಿಬ್ಬರಲ್ಲ ಆ ಪ್ರದೇಶದ ಜನರೆಲ್ಲಾ ಈ

ಯೋಜನೆಗಳಿಗೆ ಪ್ರತಿಭಟನೆ ಮಾಡಿದ್ದರಿಂದ ಆಗಿನ ಕಾಲದ ಸರ್ಕಾರ ಇವುಗಳನ್ನು ತಡೆಹಿಡಿಯಿತು. ನಂತರ ನಮ್ಮ ಸರ್ಕಾರ ಬಂದಮೇಲೆ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು ಎಂಬ ಕಾರಣದಿಂದ ಒಂದು ತಜ್ಞರ ಸಮಿತಿ ಮಾಡಿ ಬೇಡ್ತಿ ಬಗ್ಗೆ ತಜ್ಞರ ಅಭಿಪ್ರಾಯ ಕೇಳಿದ್ದೇವೆ ತಜ್ಞರು ಸಮಾನವಾದ ಅಭಿಪ್ರಾಯ ಕೊಟ್ಟಿಲ್ಲ.ಭಿನ್ನವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ.ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಸರ್ಕಾರ ಯಾರಿಗೋ ಫೇವರ್ ಮಾಡುವುದಕ್ಕಾಗಿ ಯೋಜನೆ ನಿಲ್ಲಿಸಿಲ್ಲ. ಈ ಸರ್ಕಾರವನ್ನು ಜೋತಾ ಸರ್ಕಾರ ಎಂದು ಹೇಳಿದರು. ಇದಕ್ಕೆ ಕಾರಣ ಇದಕ್ಕಿಂತ ಹಿಂದಿದ್ದ ಸರ್ಕಾರಗಳು ಏನೇನು ಮಾಡಿವೆ ಆ ಎಲ್ಲಾ ಪಾಪಕ್ಕೆ ನಾವು ಉತ್ತರ ಹೇಳಬೇಕಾಗಿದೆ. ಬೇಡ್ತಿ ಯೋಜನೆ, ಬರ್ಪೊಳೆ ಯೋಜನೆ ನಿಂತಿದ್ದು ನಮ್ಮ ಕಾಲದಲ್ಲಿ ಅಲ್ಲ ಕೈಗಾ ಯೋಜನೆ ಬಗ್ಗೆಯೂ ಸಾಕಷ್ಟು ಪ್ರತಿಭಟನೆ ಬಂತು ಮಾನ್ಯ ಸದಸ್ಯರುಗಳಿಗೂ ಗೊತ್ತಿದೆ, ಮೊನ್ನೆ ಮಂಗಳೂರು ಹತ್ತಿರ ಥರ್ಮಲ್ ಪ್ಲಾಂಟ್ ಮಾಡುವುದಕ್ಕೆ ಹೋದಾಗ ಪ್ರತಿಭಟನೆ ಮಾಡಿದರು. ಜನರಿಗೆ ಸರಿಯಾದ ತಿಳಿವಳಿಕೆ ಕೊಟ್ಟು ಅವರ ಸಹಕಾರ ಪಡೆಯಬೇಕಾಗಿದೆ.

ಶ್ರೀ ಬಿ. ಲಕ್ಕಪ್ಪ.—ನಾಲ್ಕು ವರ್ಷಗಳಿಂದ ಈ ಸರ್ಕಾರ ಇದೆ. ಹಿಂದಿನ ಸರ್ಕಾರದಲ್ಲಿ ನಿಂತಿದ್ದರೆ ನೀವು ಬಂದು ಪ್ರಾರಂಭ ಮಾಡಿದ್ದೀರಾ? ಈ ಬಗ್ಗೆ ಕಾರ್ಯ ಸಾಗಿದೆಯೆ? ಭದ್ರಾ ಯೋಜನೆ ಮಾಡಿದಾಗ ಕೆಲವಾರು ಮಿನಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳನ್ನು ನಾವು ಪ್ರಾರಂಭಿಸುವುದಕ್ಕೆ ಇಲ್ಲಿ ಅವಕಾಶ ಇದೆ. ಈಗ ನಿಮ್ಮ ಸರ್ಕಾರ ವಿದ್ಯುತ್ ಕೊರತೆಯನ್ನು ನೀಗಿಸುವುದಕ್ಕೆ ಶಾಶ್ವತವಾದ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೇ? ಜೋತಾ ತುಂಬುವುದಕ್ಕೆ ಬೇರೆ ರಾಜ್ಯಗಳಿಂದ ವಿದ್ಯುಚ್ಛಕ್ತಿ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ಹೇಳಿದ್ದಾರೆ. ಸ್ವಾವಲಂಬನೆ ದೃಷ್ಟಿಯಿಂದ ಇದು ಸಾಧುವಾದುದಲ್ಲ. ಆದ್ದರಿಂದ ಸ್ವಾವಲಂಬನೆ ದೃಷ್ಟಿಯಿಂದ ಮಿನಿ ಹೈಡ್ರೊ ಪ್ರಾಜೆಕ್ಟ್ ಮಾಡುವ ಬಗ್ಗೆ ಮಂತ್ರಿ ಎರಡನೇ ಹಂತದ ರಾಯಚೂರು ಥರ್ಮಲ್ ಪ್ರಾಜೆಕ್ಟ್ ಪ್ರಾರಂಭಿಸುವ ಬಗ್ಗೆ ಎಷ್ಟು ದಿವಸದಲ್ಲಿ ಕ್ರಮ ಕೈಗೊಳ್ಳುತ್ತೀರಿ ಎಂಬ ವಿವರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇದರ ಬಗ್ಗೆ ಹಿಂದಿನ ಸರ್ಕಾರ ಯಾವ ಲಾಂಗ್‌ರೇಂಜ್ ಪ್ಲಾನ್ ಹಾಕಿಕೊಂಡಿರಲಿಲ್ಲ. ನಾವು ಇದನ್ನು ಹಾಕಿಕೊಂಡು ಕ್ರಮ ತೆಗೆದುಕೊಳ್ಳುವುದಕ್ಕಾಗಿ ಶ್ರೀ ಎಸ್. ಜಿ. ರಾಮಚಂದ್ರ ಅವರ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಿದ್ದು ಅವರು ಕೆಲವು ಯೋಜನೆಗಳನ್ನು ಕೊಟ್ಟಿದ್ದಾರೆ. ೨೦೦೦ ಎ. ಡಿ. ವರೆಗೂ ಪ್ಲಾನ್ ಕೊಟ್ಟಿದ್ದಾರೆ ಅದಕ್ಕೆ ಎಷ್ಟು ಹಣ ಬೇಕು ತುಂಬಾದನ್ನು ತಿಳಿಸಿದ್ದಾರೆ. ಈಗ ಸದ್ಯದಲ್ಲಿ ರಾಯಚೂರು ಥರ್ಮಲ್ ಪ್ಲಾಂಟ್ ಸೆಕೆಂಡ್ ಸ್ಟೇಜ್ ಕೆಲಸಕಾರ್ಯ ಪ್ರಾರಂಭವಾಗಿದೆ. ವರಾಹಿ ಯೋಜನೆಯನ್ನು ಮುಂದಿನ ವರ್ಷ ಕೊನೆಯ ಹೊತ್ತಿಗೆ ಸಾಕಷ್ಟು ಹಣ ಒದಗಿಸಿ ಪೂರ್ಣಗೊಳಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಮಿನಿ ಹೈಡ್ರೊ ಪ್ರಾಜೆಕ್ಟ್‌ಸ ಬಗ್ಗೆ ಕೆಲವು ಖಾಸಗಿಯವರಿಗೆ ಅವಕಾಶ ಕೊಟ್ಟಿದ್ದೇವೆ. ಅದರಲ್ಲಿ ಕೆಲವು ಪ್ರಾರಂಭವಾಗಿವೆ ಹಟ್ಟಿ ಗೋಲ್ಡ್ ಮೈನ್ಸ್, ಭರೂಕ ಸ್ಟೀಲ್ ಪ್ಲಾಂಟ್ ಮತ್ತು ಮಂಲ್ಲಾಪುರದವರು ಸಿವಿಲ್ ವರ್ಕ್ಸ್ ಮಾಡುವುದಕ್ಕೆ ನಮಗೇ ಹೇಳಿದ್ದಾರೆ. ಅದರ ಕೆಲಸ ವಿವಿಧ ಹಂತದಲ್ಲಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸಭಾಪತಿಗಳೇ, ಇಬ್ಬರು ಮಾನ್ಯ ಸಚಿವರುಗಳು ಕೂಡಿ ಉತ್ತರ ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ಇಬ್ಬರನ್ನೂ ಕೇಳಿಕೊಳ್ಳುತ್ತೇನೆ. ವಾರಾಹಿ ವಿದ್ಯುತ್ ಯೋಜನೆ, ಕಾಳಿ ವಿದ್ಯುತ್ ಯೋಜನೆ, ರಾಯಚೂರು ಥರ್ಮಲ್ ಸ್ಟೇಜ್ ಒಂದು ಮತ್ತು ಎರಡು ಯಾವ ಸರ್ಕಾರ ಇದ್ದಂತಹ ಕಾಲದಲ್ಲಿ ಆದದ್ದು ? ನೀವು ಇದ್ದಾಗ ಮಾಡಿದ್ದೇ? ಹಿಂದಿನ ಸರ್ಕಾರ ಯಾವುದನ್ನೂ ಮಾಡಿಲ್ಲ ಎಂದರೆ ತಮ್ಮ ಸರ್ಕಾರ ಮಾಡಿತ್ತೇ? ತಮ್ಮ ಸರ್ಕಾರ ಬಂದಮೇಲೆ ಯಾವ ಹೊಸ ಯೋಜನೆ ಪ್ರಾರಂಭ ಮಾಡಿದ್ದೀರಿ ? ಯಾವ ಹೊಸ ಯೋಜನೆಗೆ. ಕೇಂದ್ರದ ಮಂಜೂರಾತಿ ಸಿಕ್ಕುದ್ದು ಈ ೪ ವರ್ಷಗಳ ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿದ್ದೀರಿ ? ಅಧ್ಯಕ್ಷರೇ, ಈ ಪಾಪದ ಪಾಲು ಹಂಚಬೇಕು. ಶರಾವತಿ ೧೯೭೧ರಲ್ಲಿ ಆಯಿತು. ಆದರಲ್ಲಿ ಉತ್ಪಾದನೆಯಾದ ವಿದ್ಯುತ್‌ನಲ್ಲಿ ಶೇಕಡಾ ೫೦ ಕಿಂತಾ ಹೆಚ್ಚು ವಿದ್ಯುತ್‌ನ್ನು ಒಬ್ಬ ಬೆಳಗಾಂನ ದೊಡ್ಡ ಇಂಡಸ್ಟ್ರಿಯಲಿಸ್ಟ್‌ಗೆ ಮೂರು ಕಾಸಿಗೆ ಕೊಟ್ಟವರಂ ಈಗಿನ ಸರ್ಕಾರದಲ್ಲಿ ಅಧಿಕಾರದಲ್ಲಿರುವವರಂ. ಆಗಿನ ಕಾಲದಲ್ಲಿ ಅಧಿಕಾರದಲ್ಲಿದ್ದವರಂ ಈಗಿನ ಮುಖ್ಯ ಮಂತ್ರಿಗಳು. ಜನರಿಗೆ ಬೇಕಾದ ವಿದ್ಯುತ್‌ನ್ನು ಆಗ ಒಬ್ಬ ದೊಡ್ಡ ಕೈಗಾರಿಕೋದ್ಯಮಿಗೆ ಮಾರಾಟ ಮಾಡಿ ರಾಜ್ಯದ ಹಿತಾಶಕ್ತಿಗೆ ಬಲಿಕೊಟ್ಟಿದ್ದಾರೆ. ಇಂತಹವರ ಕೈಗೆ ಅಧಿಕಾರ ಮತ್ತೆ ಬಂದಮೇಲೆ ಆ ವಿದ್ಯುತ್ ಮಾಯಂವೇ ಆಯಿತು ಎಂದು ಜನ ಹೇಳುತ್ತಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಪ್ರಶ್ನೋತ್ತರ ವೇಳೆಯಲ್ಲಿ ವಿವರಕ್ಕೆ ಹೋಗುವುದು ಬೇಕಿಲ್ಲ. ಹೊಸ ಯೋಜನೆಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಏನೇ ಯೋಜನೆಯಲ್ಲಿ ಅದನ್ನೆಲ್ಲಾ ಕೇಳಿದ್ದೇವೆ. ವಿದ್ಯುತ್ ಜೋತಾ ಏಕಕ್ಕೆ ಆಯಿತು ಎಂದರೆ. ಪತ್ರಿಕೆಯನ್ನು ಒದುತ್ತಿದ್ದಾಗ ಒಂದು ವಿಷಯ ನೋಡಿದೆ, ಇಷ್ಟೊಂದು ವಿದ್ಯುತ್ ಜೋತಾ ಬಗ್ಗೆ ಯಾವ ವಿಜ್ಞಾನಿಯನ್ನು ಕೇಳೋಣ ಎಂದರೆ, ಮಾನ್ಯ ವೀರಪ್ಪಮೊಯ್ಲಿಯವರು ಮಂತ್ರಿಗಳಾಗಿದ್ದಾಗ ಮಾನ್ಯ ಗುಂಡೂರಾಯರು ಒಂದು ಮಾತನ್ನು ಹೇಳಿದ್ದರು, ನಾನು ಈ ವಿಷಯವನ್ನು ಒಂದು ಘಂಟೆಯಲ್ಲಿ ಬಗೆಹರಿಸಂತ್ತೀನೆ ಎಂದು. ಎಂತಹ ಪವಾಡ ಪುರುಷ,ಅಂತಹ ಪವಾಡ ಪುರುಷರು ಇದ್ದುದರಿಂದಲೇ ಈ ರೀತಿ ಆಗಬಹುದು.

ಶ್ರೀ ಕೆ. ಲಕ್ಕಪ್ಪ —ಅಧ್ಯಕ್ಷರೇ, ಈ ಯೋಜನೆಗಳ ಬಗ್ಗೆ.....

(ಗೊಂದಲ)

ಅಧ್ಯಕ್ಷರು.—ಈಗ ಶ್ರೀಮತಿ ನಾಗರತ್ನಮ್ಮನವರ ಮುಂದಿನ ಪ್ರಶ್ನೆ. I have not permitted you.

ಶ್ರೀ ಕೆ. ಎಸ್. ನಾಗರತ್ನಮ್ಮ.—ಈ ಪವಾಡ ಪುರಷರು ಮತ್ತು ಆ ಪವಾಡ ಪುರುಷರು, ಇಬ್ಬರೂ ಒಂದಾಗಿ ದೇಶಕ್ಕೆ ಒಳಿತನ್ನು ಮಾಡಬೇಕೇ ಹೊರತು, ಈ ಸಭೆಯಲ್ಲಿ ಪವಾಡ ಪುರುಷರ ಬಗ್ಗೆ ಚರ್ಚೆ ಸುವುದು ಸರಿಯಲ್ಲ.

ಅಧ್ಯಕ್ಷರು.—ಪವಾಡ ಪುರುಷರು ಎಲ್ಲಾ ಕಡೆ ಇದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಪವಾಡ ಪುರುಷರು ಮತ್ತು ಆ ಪವಾಡ ಪುರುಷರು ಯಾವ ಅಮೃತವನ್ನು ಕುಡಿದು ಬೆಳೆದಿದ್ದಾರೆ ?

ಶ್ರೀ ಕೆ. ಎಸ್. ನಾಗರತ್ನಮ್ಮ.—ಅದು ಅವರಿಗೇ ಗೊತ್ತಿರಬೇಕು.

ಖಾಲಿಯಿರುವ ಪಶುವೈದ್ಯರು ಹಾಗೂ ಪಶು ಪರೀಕ್ಷಕರ ಹುದ್ದೆಗಳು.

೫೧೧. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪಶುವೈದ್ಯರುಗಳು ಹಾಗೂ ಪಶು ಪರೀಕ್ಷಕರುಗಳ ಒಟ್ಟು ಸಂಖ್ಯೆ ಎಷ್ಟು?

ಆ) ಆ ಪೈಕಿ, ಖಾಲಿ ಖಾಲಿ ಇರುವ ಪಶುವೈದ್ಯರುಗಳು ಹಾಗೂ ಪಶುಪರೀಕ್ಷಕರುಗಳ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನೋದಗಿಸುವುದು) ?

ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ಹಾಗೂ ಅವುಗಳನ್ನು ಎಷ್ಟು ದಿನಗಳಲ್ಲಿ ತುಂಬಲಾಗುವುದು ?

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನಾ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು—

ಪಶುವೈದ್ಯರು	...	೧೧೪೯	ಹುದ್ದೆಗಳು ಇರುತ್ತವೆ.
ಪಶುಪರೀಕ್ಷಕರು ದರ್ಜೆ–೧	...	೫೩೪	
ಪಶುಪರೀಕ್ಷಕರು ದರ್ಜೆ–೨	...	೧೬೧೬	

ಆ) ಆ ಪೈಕಿ ಖಾಲಿ ಇರುವ ಹುದ್ದೆಗಳು—

ಸಹಾಯಕ ಪಶುವೈದ್ಯರು	...	೭೩
ಪಶುಪರೀಕ್ಷರು ದರ್ಜೆ–೧	...	೧೦
ಪಶುಪರೀಕ್ಷರು ದರ್ಜೆ–೨	...	೨೩

(ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿದೆ)